Sri SHARANA GOWDA INAMDAR.—May I know whether you are going to reduce the period of training from 2 to one year.

Sri K. V. SHANKARA GOWDA.—We are not going to reduce from 2 to one year. We will have two years.

Sri DIGAMBARA RAO B. KALMANKAR.—Has it come to the notice of the Government that because of the fact that you have increased the period of traininig from one year to two years, most of the teachers are unable to take the benefit of the training. That is why they are not in a position to take up the training.

Sri K. V. SHANKARA GOWDA.—It is not so, Sir. The present institution is not capable of taking all the teachers, at a time. They will have to be taken, year by year.

Sri J. P. SARVESH.—Have you any figures of those teachers who have declined to undergo teachers training, Sir ?

Sri K. V. SHANKARA GOWDA.—This information is not available with me at present.

Feeder Channel to Dodda Mallekere Tank

43. Sri R. N. LAKSHMIPATHI (Gowribidanur).—

Will the Minister for Public Works be pleased to state :—

(*a*) when the feeder channel to Dodda Mallekere Tank in Gowribidanur Taluk was sanctioned and the amount spent so far ;

(*b*) the reasons for not completing the same ?

A.—Sri ALUR HANUMANTHAPPA (Deputy Minister for Minor Irrigation).—

(*a*) During February 1959. Rs. 51,122 (end of March 1964).

(*b*) Delay in acquisition.

ಶ್ರೀ ಆರ್. ಎನ್. ಲಕ್ಷ್ಮೀಪತಿ.—ಈ ಕೆರೆ ಮಂಜೂರಾಗಿ ನುಮಾರು ಒಂಬತ್ತು ವರ್ಷಗಳಾದರೂ ಕೇವಲ ಒಂದು ಫರ್ಲಾಂಗಿನಷ್ಟು ರಸ್ತೆ ನಿರ್ಮಾಣ ಮಾಡಲು ಬಂದಿರುವ ಅಡ್ಡಿಗಳೇನು ? ಮತ್ತು ಈ ಜಮೀನಿನ ಪೈಲು ಯಾವ ಆಫೀಸಿನಲ್ಲಿ ಕೊಳೆಯುತ್ತಿದೆ ? ಮತ್ತು ಇದರಿಂದ ಸರಕಾರದ ದುಡ್ಡು ಅನ್ಯಾಯವಾಗುತ್ತಿರುವುದು ನಿಮ್ಮ ಲಕ್ಷಕ್ಕೆ ಬರುತ್ತಿಲ್ಲವೇ ?

† ಶ್ರೀ ಆಲೂರು ಹನುಮಂತಪ್ಪ.—ಜೆರ್ಮಾಧಿಕಾರಿಗಳು ಇದರ ಬಗ್ಗೆ ನಮ್ಮದಲ್ಲೇ ಫೈನಲ್ ನೋಟಿಫಿಕೇಷನ್ ಇಷ್ಯೂ ಮಾಡುವುದರಲ್ಲಿದ್ದಾರೆ. ಇದಾದ ತಕ್ಷಣವೇ ಇಲ್ಲಿನ ಕೆಲಸಗಳನ್ನ ಆರಂಭ ಮಾಡುತ್ತೇವೆ. ಮತ್ತು ಅದಷ್ಟು ಬೇಗ ಮುಗಿಸುತ್ತೇವೆ.

ಶ್ರೀ ಆರ್. ಎನ್. ಲಕ್ಷ್ಮೀಪತಿ.—ಒಂಬತ್ತು ವರ್ಷಗಳಿಂದಲೂ ಇದರ ಅಕ್ವಿಸಿಷನ್ ಕೆಲಸ ವಾಗಿಲ್ಲ ಎಂದರೆ ಅಕ್ವಿಸಿಷನ್ ಕೆಲಸಕ್ಕಾಗಿ 5 ವರ್ಷ ವರ್ಷ ಹತ್ತು, ಅಥವಾ 15 ವರ್ಷ ಎಂದೇನಾದರೂ ಒಂದು ಮಿತಿ ಇಟ್ಟುಕೊಂಡಿದ್ದಾರೆಯೇ ?

ಶ್ರೀ ಆಲೂರು ಹನುಮಂತಪ್ಪ.—ಕೆಲವು ಕಡೆ ಕೆಲಸಗಳನ್ನು ಆರಂಭ ಮಾಡುವಾಗ ಮೊದಲಿಗೆ ಅಕ್ಸಿಸಿಷನ್ ತೊಂದರೆಗಳು ಬರುವುದಿಲ್ಲ. ಇಲ್ಲಿ ರ್ಯಾಂಡ್ ಅಕ್ಸಿಸಿಷನ್ ಪ್ರಶ್ನೆ ಬಂದುದರಿಂದ ಸ್ವಲ್ಪ ನಿಧಾನ ವಾಗುತ್ತಿದೆ. ಅಲ್ಲದೆ ಈಚೆಗೆ ನಮ್ಮ ಇಲಾಖೆಯ ಕೆಲಸಗಳನ್ನು ಬೇಗನೆ ಮಾಡಲು ಅನುಕೂಲವಾಗುವಂತೆ ಒಬ್ಬರು ರ್ಯಾಂಡ್ ಅಕ್ಸಿಸಿಷನ್ ಆಫೀಸರನ್ನು ನಮ್ಮ ಇಲಾಖೆಯಲ್ಲೇ ಇಟ್ಟುಕೊಂಡು ಅವರ ಮೂಲಕ ಎಲ್ಲ ಕೆಲಸಗಳನ್ನು ಬೇಗನೆ ಮಾಡಲು ಅನುಕೂಲವಾಗುತ್ತದೆ ಎಂದು ಇದರ ಬಗ್ಗೆ ಸೂಪರಿಂಟೆಂಡಿಂಗ್ ಇಂಜನೀಯರೊಡನೆ ಚರ್ಚೆ ಮಾಡಿ ಒಬ್ಬರು ರ್ಯಾಂಡ್ ಅಕ್ಸಿಸಿಷನ್ ಆಫೀಸರು ಇರಬೇಕೆ ಎನ್ನುವುದರ ಬಗ್ಗೆ ಸರಕಾರ ಆಲೋಚನೆ ಮಾಡುತ್ತಿದೆ.

ಶ್ರೀ ಎಂ. ಎಸ್. ಕೃಷ್ಣನ್.—ಇದರ ಕೆಲಸವನ್ನು ಸರಕಾರ ನಮ್ಮ ಮೊಮ್ಮಕ್ಕಳ ಕಾಲಕ್ಕೆ ಏನಾದರೂ ಮಾಡುತ್ತಾರೆಯೇ ?

ಶ್ರೀ ಆಲೂರು ಹನುಮಂತಪ್ಪ.—ಇದನ್ನು ಕಾರ್ಯಗತ ಮಾಡುವುದರಲ್ಲಿ ಸ್ವಲ್ಪ ಸಮಯ ವಾಗುತ್ತಿದೆ ಅಷ್ಟೇ ?

ಶ್ರೀ ಜಿ. ರಾಮೇಗೌಡ.—ಪ್ರಿಸ್‌ಕ್ರೈಬ್ಡ್ ಪೊಸಿಸೀಜರ್‌ನಿಂದ ಏನದಾರೂ ತಡವಾಗಬಹುದು. ಆದರೆ ಇಲ್ಲಿ ಸುಮಾರು ಒಂಬತ್ತು ವರ್ಷಗಳಷ್ಟು ತಡವಾಗಲು ಕಾರಣವೇನು ?

ಶ್ರೀ ಆಲೂರು ಹನುಮಂತಪ್ಪ.—ಇದರಲ್ಲಿ ರ್ಯಾಂಡ್ ಅಕ್ಸಿಸಿಷನ್ ತೊಂದರೆ ಬಂದಿತು. ಮೊದಲಿಗೆ ಇದು ಇರಲಿಲ್ಲ. ಸುಮಾರು ಎರಡು ಮೂರು ವರ್ಷಗಳಿಂದೀಚೆಗೆ ಇದು ಬಂದಿದೆ.

ಶ್ರೀ ಕೆ. ಎಚ್. ರಂಗನಾಥ್.—ಇದರ ಅಕ್ಸೆಸಿಷನ್ ಯಾವಾಗ ಆರಂಭವಾಯಿತು ? ಮತ್ತು ಇದು ಈಗ ಯಾವ ಸ್ಟೇಜ್‌ನಲ್ಲಿದೆ ?

ಶ್ರೀ ಆಲೂರು ಹನುಮಂತಪ್ಪ.—1964 ನೇ ಇಸವಿಯಿಂದೀಚೆಗೆ ರ್ಯಾಂಡ್ ಅಕ್ಸಿಸಿಷನ್ ಕೇಸ್‌ನ ತೊಂದರೆಗಳು ಬಂದಿವೆ. ಆದರೆ ಇವೆಲ್ಲ ಮುಗಿದು ಈಗ ಫೈನಲ್ ಸ್ಟೇಜಿಗೆ ಬಂದಿದೆ.

ಶ್ರೀ ಎಂ. ನಾಗಪ್ಪ.—ಇದರಲ್ಲಿ ಯಾರಾದರೂ ಅಬ್‌ಜಕ್ಷನ್ ಮಾಡಿದ್ದರೆ ಹೇಗೆ ?

ಶ್ರೀ ಆಲೂರು ಹನುಮಂತಪ್ಪ.—ರೈತರು ಇದರ ಬಗ್ಗೆ ಅಡಚಣೆಗಳನ್ನು ತಂದಿದ್ದರು ಆದ್ದರಿಂದ ಇಲ್ಲಿ ಅಕ್ಸಿಸಿಷನ್ ಕೇಸು ಮಾಡಬೇಕಾಯಿತು.

ಶ್ರೀ ಎ. ಮುನಿಯಪ್ಪ.—ಇಲ್ಲಿ ಎಷ್ಟು ರೂಪಾಯಿಗಳ ಅಂದಾಜನ್ನು ಮಂಜೂರು ಮಾಡಿದ್ದೀರಿ ? ಹಾಗೆ ಮಂಜೂರು ಮಾಡುವಾಗ ಇಂತಹ ತೊಂದರೆಗಳು ಮೊದಲು ತಮಗೆ ಬಂದಿರಲಿಲ್ಲವೇ ? ಇಷ್ಟು ದುಡ್ಡನ್ನು ಮಂಜೂರು ಮಾಡಿದ್ದರೂ ಕೂಡ ರೈತರಿಂದ ಈಗ ಪುನಃ ಸೆಸ್ ಎಂದು ವಸೂಲು ಮಾಡುತ್ತಿರುವುದು ಸರಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಆಲೂರು ಹನುಮಂತಪ್ಪ.—ಇದಕ್ಕಾಗಿ ಸುಮಾರು 53,000 ರೂಪಾಯಿಗಳ ಅಂದಾಜು ಆಗಿ ಇದರಲ್ಲಿ ಸುಮಾರು 51,000 ದಷ್ಟು ಹಣ ಖರ್ಚಾಗಿದೆ. ರೈತರಿಂದ ಯಾವ ಹಣವನ್ನೂ ಇಲ್ಲಿ ವಸೂಲು ಮಾಡುತ್ತಿಲ್ಲ.

ಶ್ರೀ ಆರ್. ಎನ್. ಲಕ್ಷ್ಮೀಪತಿ.—ಇಂತಿಷ್ಟು ದಿವಸಗಳಲ್ಲಿ ಇಲ್ಲಿನ ರೈತರಿಗೆ ನೀರು ಕೊಡುತ್ತೀರಿ ಎನ್ನುವ ಆಶ್ವಾಸನೆಯನ್ನಾದರೂ ಇಲ್ಲಿ ಕೊಡುತ್ತೀರಾ ?

ಶ್ರೀ ಆಲೂರು ಹನುಮಂತಪ್ಪ.—ಫೈನಲ್ ನೋಟಿಫಿಕೇಷನ್ ಆದ ತಕ್ಷಣ ಜಮೀನನ್ನು ಸ್ವಾಧೀನಕ್ಕೆ ತೆಗೆದುಕೊಂಡು ನಮ್ಮ ಇಲಾಖೆಯವರು ಕೆಲಸ ಪ್ರಾರಂಭ ಮಾಡುತ್ತಾರೆ.

ಶ್ರೀ ಎಚ್. ಬಿ. ಜ್ವಾಲನಯ್ಯ.—53 ಸಾವಿರ ರೂಪಾಯಿಗಳಷ್ಟು ಸುಮಾರು ಒಂಬತ್ತು ವರ್ಷ ಗಳ ಹಿಂದೆಯೇ ಖರ್ಚು ಮಾಡಬೇಕೆಂದು ಮಾಡಿದ್ದು ರೈತರು ಹೆಚ್ಚು ಆಹಾರ ಬೆಳೆಯಬೇಕೆಂದು ಮಾಡಲಾಗಿತ್ತು. ಇನ್ನೂ ಕೇವಲ ಒಂದೆರಡು ಸಾವಿರ ಮಾತ್ರ ಖರ್ಚಾಗದೆ ಉಳಿದಿದೆ ಎಂದರೆ ಇಲ್ಲಿ ವಿರೋಧ ಪಕ್ಷದ ಸದಸ್ಯರು ಅರಿಸಿ ಬಂದಿದ್ದಾರೆ ಎಂದು ಇದು ತಡವಾಗುತ್ತಿದೆಯೇ ?

ಶ್ರೀ ಆಲೂರು ಹನುಮಂತಪ್ಪ.—ಇಲ್ಲಿ ಒಂದು ಫೀಡರು ಚಾನಲ್ ಮಾಡಬೇಕು ಮತ್ತು ಇಲ್ಲಿ ಸುಮಾರು 167 ಎಕರೆ ಅಚ್ಚುಕಟ್ಟು ಇದೆ. ಇದು ದೊಡ್ಡ ಮಲ್ಲಿಕೆರೆ ಟ್ಯಾಂಕಿನ ಕೆಲಸ. ಇದರಲ್ಲಿ ಹೆಚ್ಚು ನೀರು ನಿಲ್ಲುವಂತೆ ಮಾಡಿಕೊಟ್ಟರೆ ಇಲ್ಲಿನ ರೈತರು ಎರಡು ಬೆಳೆ ತೆಗೆಯಲು ಅನುಕೂಲವಾಗುತ್ತದೆ ಎಂದು ಸರಕಾರ ಇದನ್ನು ಮಾಡಬೇಕೆಂದು ಇದೆ. ಇದರಲ್ಲಿ ವಿರೋಧ ಪಕ್ಷ ಈ ಪಕ್ಷ ಎಂದೇನಿಲ್ಲ. ಇದನ್ನು ಬೇಗನೆ ಮಾಡಿ ಜನರಿಗೆ ನೀರು ಒದಗಿಸಿಕೊಡಬೇಕೆಂದು ಪ್ರಯತ್ನ ಮಾಡುತ್ತಿದ್ದೇವೆ.

1-30 P.M.

ಶ್ರೀ ಜಿ. ರಾಮೇಗೌಡ.—ಇನ್ನೂ ಎರಡು ಸಾವಿರ ರೂಪಾಯಿಗಳನ್ನು ಖರ್ಚು ಮಾಡ ಬೇಕಾಗಿದೆಯೆಂದು ಹೇಳಿದಿರಿ, ಯಾವ ಭಾಗದಲ್ಲಿ ಕೆಲಸ ನಿಂತಿದೆ ?

ಶ್ರೀ ಆಲೂರು ಹನುಮಂತಪ್ಪ.—ದೊಡ್ಡಬಳ್ಳಾಪುರದ ಪಕ್ಕದ ಭಾಗದಲ್ಲಿ ಒಂದೆರಡು ಫರ್ಲಾಂಗುಗಳಷ್ಟು ಕೆಲಸ ಕಾರ್ಯಗಳು ನಿಂತಿವೆ.

ಶ್ರೀ ಎಂ. ಎಸ್. ಕೃಷ್ಣನ್.—ಫೈನರ್ ನೋಟಿಫಿಕೇಷನ್ ಬಂದಮೇಲೆ ಕೆಲಸ ಮುಂದುವರೆ ಸರಾಗುತ್ತದೆಂದು ಹೇಳಿದಿರಿ. ಫೈನರ್ ನೋಟಿಫಿಕೇಷನ್ ಯಾವಾಗ ಆಗುತ್ತದೆ ಎಂಬುದನ್ನು ಹೇಳುತ್ತೀರಾ ?

ಶ್ರೀ ಆಲೂರು ಹನುಮಂತಪ್ಪ.—ಸಬ್ ಡಿವಿಜನ್ ಆಫೀಸ್‌ನಿಂದ ರೆಕಾರ್ಡ್ಸ್ ಜಿಲ್ಲಾಧಿಕಾರಿ ಗಳಿಗೆ ಬಂದಿದೆ. ಜರೂರಾಗಿ ಮಾಡಬೇಕೆಂದು ಹೇಳಿದ್ದೇವೆ, ಮಾಡುತ್ತಾರೆ.

ಶ್ರೀ ಜಿ. ಅಮರೇಗೌಡ.—ಎಷ್ಟು ಏರಿಯಾ ಬಾಕಿ ಉಳಿದಿದೆ ಎಂಬುದನ್ನು ಹೇಳುತ್ತೀರಾ ? ಮತ್ತು ಎಷ್ಟು ಎಕರೆಗೆ ನೀರಾವರಿಯಾಗುತ್ತದೆ ?

ಶ್ರೀ ಆಲೂರು ಹನುಮಂತಪ್ಪ.—ಕುಮದ್ವತಿ ನದಿಯಿಂದ ದೊಡ್ಡ ಮಲ್ಲೇಕೆರೆಗೆ ನೀರೊದಗಿಸು ವುದಕ್ಕಾಗಿ ಒಂದು ಚಾನಲ್ ಹಾಕುವ ಬಗ್ಗೆ ಒಂದೆರಡು ಫರ್ಲಾಂಗ್‌ಗಳಷ್ಟು ಕೆಲಸ ಬಾಕಿ ನಿಂತಿದೆ. ಸುಮಾರು 167 ಎಕರೆಗೆ ನೀರಾವರಿಯಾಗುತ್ತದೆ.

ಶ್ರೀ ಆರ್. ಎನ್. ಲಕ್ಷ್ಮೀಪತಿ.—ಭೂಸ್ವಾಧೀನದಲ್ಲಾದ ವಿಳಂಬಕ್ಕಾಗಿ ಸರ್ಕಾರದ ಹಣ ವ್ಯಯವಾಗುತ್ತಿರುವುದರಿಂದ, ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಕ್ರಮ ತೆಗೆದು ಕೊಳ್ಳುತ್ತೀರಾ ?

ಶ್ರೀ ಆಲೂರು ಹನುಮಂತಪ್ಪ.—ಭೂಸ್ವಾಧೀನದಲ್ಲಾಗಿರುವ ವಿಳಂಬಕ್ಕೆ ಅಧಿಕಾರಿಗಳು ಕಾರಣ ಎಂದು ಹೇಳುವುದಕ್ಕಾಗುವುದಿಲ್ಲ. ಮೊದಲು ಪ್ರಾರಂಭದಲ್ಲಿ ಕೆಲಸ ಸುಲಲಿತವಾಗಿ ನಡೆಯುತ್ತದೆಂದು ನಿರೀಕ್ಷಣೆ ಮಾಡಿದ್ದೆವು. ಆದರೆ ಈಗ ಸ್ವಲ್ಪ ಅಡಚಣೆ ಬಂದಿದೆ. ಅದನ್ನು ಅದಷ್ಟು ಜಾಗ್ರತೆ ನಿವಾರಣೆ ಮಾಡುತ್ತೇವೆ.

ಶ್ರೀ ಜಿ. ರಾಮೇಗೌಡ.—ಗೌರಿಬಿದನೂರಿಗೆ ದೊಡ್ಡಬಳ್ಳಾಪುರದ ನದಿಯ ನೀರನ್ನು ಉಪಯೋಗಿಸಿಕೊಳ್ಳುವ ಬಗ್ಗೆ ಜನಗಳಿಂದ ಏದಾದರೂ ಅಡ್ಡಿ ಬಂದಿದೆಯೆ ?

ಶ್ರೀ ಆಲೂರು ಹನುಮಂತಪ್ಪ.—ಅಂತಹ ಅಡ್ಡಿ ಯಾವುದೂ ಬಂದಿಲ್ಲ.

ಶ್ರೀ ಸೋಲೂರು ಸಿದ್ದಪ್ಪ.—ಭೂಸ್ವಾಧೀನ ಮಾಡಿಕೊಳ್ಳುವುದಕ್ಕೆ ಈಗಿರುವ ಕಾನೂನನ್ನು ಬದಲಾವಣೆ ಮಾಡುವುದಕ್ಕಾಗುವುದಿಲ್ಲವೆ ?

ಶ್ರೀ ಆಲೂರು ಹನುಮಂತಪ್ಪ.—ಅದಕ್ಕಾಗಿಯೇ ಮಾನ್ಯ ಸಭೆಗೆ ಈಗಾಗಲೆ ಹೇಳಿದೆ, ಸೂಪರಿಂಟೆಂಡಿಂಗ್ ಇಂಜನೀಯರ್ ಅವರ ಅಧೀನದಲ್ಲಿ ಒಬ್ಬರು ರ್ಯಾಂಡ್ ಅಕ್ವಿಜಿಷನ್ ಆಫೀಸರನ್ನು ಕೊಟ್ಟರೆ ಕೆಲಸಕಾರ್ಯಗಳು ಜರೂರಾಗಿ ಆಗುತ್ತದೆಂದು ಮತ್ತು ಸರ್ಕಾರಕ್ಕೆ ಹಣವೂ ಉಳಿಯುತ್ತ ದೆಂದು ಸರ್ಕಾರದ ಅಭಿಪ್ರಾಯವಾಗಿದೆ.

ಶ್ರೀ ಎ. ಮುನಿಯಪ್ಪ.—ಅಕ್ವಿಜಿಷನ್ ಆಫೀಸರನ್ನು ನೇಮಿಸಿದ್ದೇವೆಂದು ಹೇಳಿದಿರಿ, ಈ ಕೆಲಸಕ್ಕೆ ಸಂಬಂಧಪಟ್ಟಂತೆ ಎಷ್ಟು ದಿವಸಗಳಲ್ಲಿ ಭೂಸ್ವಾಧೀನ ಮಾಡಿಕೊಳ್ಳಬೇಕೆಂದು ಅಪ್ಪಣೆ ಕೊಡಿಸಿದ್ದೀರಿ ಮತ್ತು ಈ ಕೆಲಸಕ್ಕೆ ಎಷ್ಟು ಹಣವನ್ನು ಅಲಾಟ್ ಮಾಡಿದ್ದೀರಿ ?

ಶ್ರೀ ಆಲೂರು ಹನುಮಂತಪ್ಪ.—ಈಗಿರುವ ತೊಡಕುಗಳನ್ನು ನಿವಾರಣೆ ಮಾಡಬೇಕೆಂಬುದಾಗಿ ಜಿಲ್ಲಾಧಿಕಾರಿಗಳಿಗೆ ಹೆಚ್ಚಿನ ಅಧಿಕಾರವನ್ನು ಕೊಡಲಾಗಿದೆ. ಮತ್ತು ಪಾರ್ಲಿಮೆಂಟ್‌ನಲ್ಲಿ ಭೂಸ್ವಾಧೀನದ ಕಾನೂನನ್ನು, ಕೆಲಸಕಾರ್ಯಗಳು ಜರೂರಾಗಿ ಆಗುವಂತೆ ಮಾಡಲು ಬದಲಾವಣೆ ಮಾಡುವ ಬಗ್ಗೆ ಪರಿಶೀಲನೆ ಮಾಡುತ್ತಿದ್ದಾರೆ. ಈ ರೀತಿಯ ತೊಡಕುಗಳು ಬರುವುದು ಅನಿವಾರ್ಯ.

ಶ್ರೀ ಎ. ಮುನಿಯಪ್ಪ.—ಭೂಸ್ವಾಧೀನಕ್ಕೆ ಎಷ್ಟು ಹಣವನ್ನು ಅಲಾಟ್ ಮಾಡಿದ್ದೀರಿ ಎಂಬುದನ್ನು ಹೇಳುತ್ತೀರಾ ?

ಶ್ರೀ ಆಲೂರು ಹನುಮಂತಪ್ಪ.—2, 416 ರೂಪಾಯಿಗಳನ್ನು ಅಲಾಟ್ ಮಾಡಿದ್ದೇವೆ. ಜಿಲ್ಲಾಧಿಕಾರಿಗಳಿಂದ ಫೈನರ್ ಆಗಿ ವರದಿ ಬರುವವರೆಗೂ ಎಷ್ಟಾಗುತ್ತದೆ ಎಂಬುದನ್ನು ಹೇಳುವುದಕ್ಕಾಗುವುದಿಲ್ಲ.

ಶ್ರೀ ಎಚ್. ಡಿ. ದೇವೇಗೌಡ.—1964ರಲ್ಲಿ ರೋಕೋಪಯೋಗಿ ಇರಾಖೆಯಿಂದ ರೆವಿನ್ಯೂ ಇರಾಖೆಗೆ ಭೂಸ್ವಾಧೀನ ಮಾಡಿಕೊಳ್ಳುವ ಬಗ್ಗೆ ಪ್ರಪೋಸಲ್ ಕಳಿಸಿದಿರಿ, 1964ರಲ್ಲಿ ನೀವು ಸಂಬಂಧ ಪಟ್ಟಜಮೀನನ್ನು ಸ್ವಾಧೀನಪಡಿಸಿಕೊಂಡಿದ್ದರೆ ಏನು ಖರ್ಚು ಬರುತ್ತಿತ್ತೋ ಅದಕ್ಕಿಂತ ಹೆಚ್ಚು ಖರ್ಚು ಈಗ ಬರುವುದರಿಂದ ಸಂಬಂಧಪಟ್ಟ ಅಧಿಕಾರಿಗಳಿಂದ ಸರ್‌ಚಾರ್ಜ್ ವಸೂಲು ಮಾಡುತ್ತೀರಾ ?

ಶ್ರೀ ಆಲೂರು ಹನುಮಂತಪ್ಪ.—ಈ ಪ್ರಶ್ನೆ ಕೇಳಿದವರೇ ಹೇಳಿದ್ದಾರೆ, ಸ್ವಾಧೀನಪಡಿಸಿಕೊಳ್ಳ ಬೇಕಾಗಿರುವ ಜಮೀನು ಬಂಜರು ಭೂಮಿಯಾಗಿರುವುದರಿಂದ ಹೆಚ್ಚು ಬೆಲೆ ಬಾಳುವುದಿಲ್ಲವೆಂದು. ಇವತ್ತಿನವರೆಗೂ ಜಿಲ್ಲಾಧಿಕಾರಿಗಳು ಈ ಭೂಮಿಯ ಬೆಲೆಯನ್ನು ನಿಗದಿ ಮಾಡಿಲ್ಲ. ಆದ್ದರಿಂದ ಭೂಮಿಯ ಬೆಲೆ ಜಾಸ್ತಿಯಾಗತ್ತದೆಂದು ಹೇಳುವುದಕ್ಕಾಗುವುದಿಲ್ಲ.

Sri H. SIDDAVEERAPPA.—What are the causes for the delay in acquisition ?

Sri ALUR HANUMANTHAPPA.—No other causes except building up records and issuing final notification.

Sri H. SIDDAVEERAPPA.—That shows utter incompetence.

ಶ್ರೀ ಎನ್. ಜಿ. ಹಾಲಪ್ಪ.—ಸ್ವಾಮಿ, ಒಂದು ಫರ್ಲಾಂಗು ಬಂಜರು ಜಮೀನು ಅಕ್ವಿಜೀಷನ್ ಮಾಡುವುದಕ್ಕೆ ಸ್ಪೆಷರ್ ಲ್ಯಾಂಡ್ ಅಕ್ವಿಜೀಷನ್ ಆಫೀಸರ್ ನೇಮಕ ಮಾಡಿದ್ದೀರಾ ಅಥವ ಅಸಿಸ್ಟೆಂಟ್ ಕಮಿಷನರ್ ಅವರು ಈ ಕೆಲಸ ಮಾಡುತ್ತಾರೆಯೇ ?

ಶ್ರೀ ಆಲೂರು ಹನುಮಂತಪ್ಪ.—ಅಸಿಸ್ಟೆಂಟ್ ಕಮಿಷನರ್ ಅವರು ಈ ಕಾರ್ಯ ಮಾಡುತ್ತಾರೆ.

Villages electrified and Pumpsets installed in Kolar District

44. **Sri H. C. LINGA REDDY** (Malur).—

Will the Minister for Public Works be pleased to state.—

(*a*) the number of villages electrified and pumpsets installed in Kolar District under Rural Electrification Programme during the III Plan period ;

(*b*) the programme of Rural Electrification in the District during the IV Plan period for the supply of electricity to domestic and non-domestic purposes;

(*c*) the programme of Rural Electrification in the State for the supply of electricity to domestic and non-domestic purposes along with the proposed outlay and expenditure ?

A.—**Sri VEERENDRA PATIL** (Minister for Public Works).—

(*a*) Villages electrified. 131
Pumpsets serviced. 5,112.

(*b*) *Vide* Statement 'A' appended.

(*c*) *Vide* Statement 'B' appended.